

## ಶ್ರೀ ಶಂಕರಾಚಾರ್ಯ ಉದ್ಯಾನವನ

ಕೊಲ್ಲೂರಿಗೆ ಹೋಗಿ ಮೂಕಾಂಬಿಕೆಯ ದರ್ಶನ ಮಾಡುವವರಲ್ಲಿ ಅಲ್ಲೇ ಪಕ್ಕದಲ್ಲಿರುವ ಶ್ರೀ ಶಂಕರಾಚಾರ್ಯ ಉದ್ಯಾನವನಕ್ಕೆ ಭೇಟಿ ಕೊಡುವವರು ಕಡಿಮೆ. ಇದು ಸಮತಟ್ಟಾದ ಜಾಗದಲ್ಲಿರುವ ಉದ್ಯಾನವನವಲ್ಲ. ಬೆಟ್ಟವನ್ನೇ ಕಡಿದು ಇದನ್ನು ನಿರ್ಮಿಸಲಾಗಿದೆ. ಉದ್ಯಾನವನದ ತುದಿಯವರೆಗೆ ನಡೆದಾಡಲು ಕಲ್ಲಿನ ಮೆಟ್ಟಲುಗಳನ್ನು ಅಳವಡಿಸಿದ್ದಾರೆ. ಇಲ್ಲಿ ಕುಳಿತಿರುವ ಭಂಗಿಯಲ್ಲಿ ಶಂಕರಾಚಾರ್ಯರ ಆಳೆತ್ತರದ ಪ್ರತಿಮೆ ಇದೆ. ಅತ್ಯಂತ ಆಕರ್ಷಕವಾಗಿರುವ ಈ ಪ್ರತಿಮೆ ಇಲ್ಲಿನ ವಿಶೇಷ. ಕುಳಿತುಕೊಳ್ಳಲು ಅಲ್ಲಲ್ಲಿ ಸಿಮೆಂಟಿನಿಂದ ತಯಾರಿಸಲಾದ ಬೆಂಚುಗಳು ಇವೆ. ಕಾರಂಜಿ, ತರತರದ ಹೂಗಿಡಗಳಿದ್ದರೂ ನಿರ್ವಹಣೆಯ ಕೊರತೆಯಿಂದ ಸೊರಗಿದೆ.

**- ಸಹನಾ ಕಾಂತಬೈಲು, ಮಡಿಕೇರಿ**



## ಪುಷ್ಪಗಿರಿಯ ಮೇಲೊಂದು ಪಟ್ಟೆಪಾರೆ

ಕೊಡಗಿನ ಅತಿ ಎತ್ತರದ ಪರ್ವತ ಶ್ರೇಣಿಯಾದ ಪುಷ್ಪಗಿರಿ ಪರ್ವತವು ಸಂರಕ್ಷಿತ ವನ್ಯಧಾಮವಾಗಿದೆ. ಬಾನೆತ್ತರದ ಗಿರಿಶೃಂಗಗಳು, ಹಚ್ಚಹಸಿರಿನ ಗಿಡಮರಗಳಿಂದ ಹಾಗೂ ಅಪರೂಪದ ಪ್ರಾಣಿಗಳಿಂದ ಪ್ರಸಿದ್ಧವಾಗಿದೆ. ಪುಷ್ಪಗಿರಿಯಲ್ಲೇ ಪಟ್ಟೆಪಾರೆ ಎಂಬ ಸೋಜಿಗದ ಸ್ಥಳವೊಂದಿದೆ.

ಸೋಮವಾರಪೇಟೆಯಿಂದ 25ಕೀ.ಮಿ. ದೂರದ ಈ ಸ್ಥಳದಲ್ಲಿ ಈ ನಿರ್ಮಾಣಗಳು ಪುರಾತನ ಕಾಲದ ಮಾನವರು ನಿರ್ಮಿಸಿದ ಮನೆಗಳಂತೆ ಕಾಣಿಸುತ್ತವೆ. ಆಕರ್ಷಕ ಚಿಕ್ಕ ಚಿಕ್ಕ ಕಲ್ಲುಗಳಿಂದ ಮಾಡಿದ ಈ ಪುಟ್ಟ ಮನೆಗಳನ್ನು ಯಾರು ಯಾಕೆ ಮಾಡಿದ್ದಾರೆ ಅನ್ನೋ ಪ್ರಶ್ನೆಗಳು ಕಾಡುವುದು ಸಹಜ. ಪ್ರತಿ ವರ್ಷ ಇಲ್ಲಿನ ಶ್ರೀ ಶಾಂತಮಲ್ಲಿಕಾರ್ಜುನ ದೇವಾಲಯಕ್ಕೆ ಮಳೆ ಕೇಳಲು ಬರುವ ಸುತ್ತಮುತ್ತಲಿನ ಗ್ರಾಮಸ್ಥರು ಕಲ್ಲಿನಿಂದ ಈ ಪುಟ್ಟ ಗೋಪುರದ ಆಕಾರಲ್ಲಿ, ಗುಹೆಗಳ ಆಕಾರದಲ್ಲಿ ನಿರ್ಮಿಸಿ ಹೋಗುತ್ತಾರೆ. ಹೀಗೆ ಒಬ್ಬರನ್ನು ನೋಡಿ ಇನ್ನೊಬ್ಬರು ನಿರ್ಮಿಸಿದ್ದು ಅಪಾರ ಸಂಖ್ಯೆಯಲ್ಲಿ ಕಂಡು ಬಂದು ಪ್ರವಾಸಿಗರನ್ನು ಸೆಳೆಯುತ್ತವೆ.

**- ಸುರೇಶ, ಸೋಮವಾರಪೇಟೆ**

## ತಿಮಿರ ದೂರಮಾಡುವ ತಿರುಗುಣಿ

ಚಿತ್ರದಲ್ಲಿರುವ ಮರದ ತಿರುಗುಣಿಯನ್ನು ಮನೆಯಲ್ಲಿ ದೀಪಹಚ್ಚಿಡಲು ಬಳಸಲಾಗುತ್ತಿತ್ತು. ಗೋಡೆಗೆ ಹೊಡೆದ ತಿರುಗುಣಿಯನ್ನು ಯಾವ ಕಡೆಗೆ ಬೇಕೋ ಹಾಗೆ ಸುಲಭವಾಗಿ ತಿರುಗಿಸಿಕೊಳ್ಳಬಹುದು. ತಿರುಗುಣಿಯ ಶಿಖರದ ಮೇಲೆ ಇಟ್ಟ ಹಣತೆಯ ಬೆಳಕು ಎಲ್ಲಡೆ ಹರಿಯುತ್ತಿತ್ತು. ಆದರೆ ಪ್ರಕಾಶಮಾನವಾದ ವಿದ್ಯುತ್ ಬಲ್ಬ್‌ಗೆ ಜಾಗ ಬಿಟ್ಟುಕೊಟ್ಟಿರುವ ತಿರುಗುಣಿ ಈಗ ತಾನು ಜಾಗ ಖಾಲಿಮಾಡಿದೆ.

**- ಮ.ಗು.ಬಸವಣ್ಣ, ನಂಜನಗೂಡು**

